ಚಿಕ್ಕಮಗಳೂರು ನಗರ ನೀರು ಸರಬರಾಜು ಯುಗಚಿ ಕಾಮಗಾರಿ ಯೋಜನೆಯಲ್ಲಿ ಅವ್ಯವಹಾರ

2791 (3141) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ನಗರ ನೀರು ಸರಬರಾಜುಯೋಜನೆ ಯುಗಚಿ 3ನೇ ಹಂತದ ಕಾಮಗಾರಿ ಕೆಲಸಕ್ಕೆ ಸಂಬಂಧಿಸಿದ 1.30 ಕೋಟಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ವ್ಯವಸ್ಥಾಪಕ ನಿರ್ದೇಶಕರೇ ಈ ಅವ್ಯವಹಾರದಲ್ಲಿ ಭಾಗಿಯಾಗಿದ್ದು ಮದ್ರಾಸಿನ ಸುಪ್ರೀಂ ಪೈಪ್ ಕಂಪನಿ ನಕಲಿ ಬ್ಯಾಂಕ್‌ನ ಚೆಕ್‌ನ್ನು ಭದ್ರತಾ ಠೇವಣಿಯಾಗಿ ಪಡೆದಿದ್ದು ಪೇ ಆರ್ಡರ್ ಅಥವಾ ಡಿ.ಡಿ. ಮೂಲಕ ಭದ್ರತಾ ಠೇವಣಿ ಪಡೆಯಬೇಕೆಂಬ ನಿಯಮ ವನ್ನೇ ಉಲ್ಲಂಘಿಸಿ ಗುತ್ತಿಗೆ ಪಡೆದಿದ್ದ ಸುಪ್ರೀಂ ಪೈಪ್ ಕಂಪನಿ ತಲೆಮರೆಸಿಕೊಂಡು ಹೋಗಿರುವುದು ನಿಜವೇ?

ಇ) ಈ ಕಂಪನಿ ಎಷ್ಟು ಮಾತ್ರದ ಕೆಲಸ ಮಾಡಿದೆ? ಈ ಕಂಪನಿಗೆಷ್ಟು ಹಣ ಪಾವತಿಸಲಾಗಿದೆ? ಈಗ ಈ ಕಾಮಗಾರಿಯನ್ನು ಯಾರಿಗೆ ವಹಿಸಲಾಗಿದೆ? ಈ ಅವ್ಯವಹಾರಕ್ಕೆ ಕಾರಣರಾದ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ನಿಜವಲ್ಲ. ಭದ್ರತಾ ಠೇವಣಿಯಾದ 16.10 ಲಕ್ಷಗಳಿಗೆ ಕಂಪನಿಯವರು ಟೈಮ್ಸ್ ಬ್ಯಾಂಕ್ ಚೆನ್ನೈ ಹೆಸರಿನ ಚೆಕ್ ಕೊಟ್ಟಿದ್ದು, ಈ ಹಣವು ಮಂಡಲಿಗೆ ಜಮಾ ಆಗಿರುರುತ್ತದೆ. ಮೆ: ಸುಪ್ರೀಂ ಪೈಪ್ ಕಂಪನಿ ಮದ್ರಾಸ್, ತಲೆ ಮರೆಸಿಕೊಂಡಿರುವುದು ನಿಜವಲ್ಲ.

ಇ) ಕಂಪನಿಯವರು ಈಗಾಗಲೇ ಸುಮಾರು ರೂ. 40.00 ಲಕ್ಷಗಳಷ್ಟು ಕೆಲಸ ಮಾಡಿದ್ದಾರೆ. ಮಂಡಲಿಯಿಂದ ಈವರೆವಿಗೂ ಯಾವುದೇಬಿಲ್ಲುಗಳನ್ನು ಪಾವತಿಸಲಾಗಿರುವುದಿಲ್ಲ. ಈ ಕಾಮಗಾರಿಯನ್ನು ಮೆ: ಸುಪ್ರೀಂ ಪೈಪ್ ಕಂಪನಿ ಪೈವೇಟ್ ಲಿಮಿಟೆಡ್ ಹಾಗೂ ಅವರ ಜೊತೆಯಲ್ಲಿ ಪಾಲುದಾರ ಕಂಪನಿಯವರಾದ ಮೆ: ಪ್ರಾಂಜಲಿ ಎನ್ ವೈರ್‌ನ ಮೆಂಟ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಇವರು ಸೇರಿ ಯೋಜನೆಯ ಕಾಮಗಾರಿಗಳನ್ನು ಅನುಮೋದಿತ ಹಳೇಟೆಂಡರ್ ದರಗಳಲ್ಲಿಯೇ ಮಾಡುತ್ತಿರುತ್ತಾರೆ. ಆದ್ದರಿಂದವ್ಯವಸ್ಥಾಪಕ ನಿರ್ದೇಶಕರ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪುರಸಭೆ, ನಗರಸಭೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಬೇರೆ ಇಲಾಖೆಯಿಂದ ನಿಯೋಜನೆ ಮಾಡಿರುವುದನ್ನು ತಡೆಹಿಡಿಯುವುದು

2792 (3361) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತಿಕೋಟ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುರಸಭೆಗಳು, ನಗರಸಭೆಗಳು ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಆಯುಕ್ತರ ಹುದ್ದೆಗೆ ಕರ್ನಾಟಕ ಪೌರಾಡಳಿತ ಸೇವಾ ನಿಯಮಗಳಿಗೆ ವ್ಯತಿರಿಕ್ತವಾಗಿ ಬೇರೆ ಬೇರೆ ಇಲಾಖೆಗಳಿಂದ ಅಧಿಕಾರಿಗಳ ನಿಯೋಜನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪೌರಾಡಳಿತ ಸೇವೆಗೆ ಸೇರಿದ ಸಿಬ್ಬಂದಿ ದೊರಕಿದ ಕೂಡಲೇ ನಿಯೋಜನೆ ಮೇಲೆ ಬಂದಿರುವವರನ್ನು ಮಾತೃ ಇಲಾಖೆಗೆ ಹಿಂತಿರುಗಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಾಗಿದೆಯೇ?

ಇ) ಪೌರಾಡಳಿತ ಸೇವೆಗೆ ಸೇರಿದ ನ್ಯಾಯಯುತವಾಗಿ ಕಾರ್ಯ ನಿರ್ವಹಿಸಬೇಕಾದ ಅಧಿಕಾರಿಗಳು ಕಡ್ಡಾಯ ಕಾಯುವಿಕೆಯ ಶಿಕ್ಷೆ ಅನುಭವಿಸುತ್ತಿದ್ದು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಹೌದು.

ಆ) ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಇ) ನೇಮಕಾತಿ ನಿರೀಕ್ಷಣೆಯಲ್ಲಿರುವುದು ಗಮನಕ್ಕೆ ಬಂದಿದೆ.

<u>ತಡೆ ಹಿಡಿಯಲಾಗಿದ್ದ ಪ್ರಶ್ನೋತ್ತರಗಳು</u>

ಸೇಡಂ ತಾಲ್ಲೂಕಿನಲ್ಲಿನ ಸಿ.ಸಿ.ಎ. ಕಾಲೋನಿಯಿಂದ ಮದಕಲ್ ಗ್ರಾಮದ ಕೂಡು ರಸ್ತೆ ಕೆಲಸದಲ್ಲಿ ಅವ್ಯವಹಾರ

189 (1872) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಸಿ.ಸಿ.ಎ. ಕಾಲೋನಿಯಿಂದ ಮದಕಲ್ ಗ್ರಾಮದ ಕೂಡು ರಸ್ತೆಗೆ ಕೆಲಸಮಾಡದೇ ಹಣ ಖರ್ಚು ಹಾಕಿ ಅವ್ಯವಹಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ರಸ್ತೆಯ ಬಗ್ಗೆ 1997-98, 1998-99 ಮತ್ತು 1999-2000ನೇ ಸಾಲುಗಳಲ್ಲಿ ಖರ್ಚು ಹಾಕಿರುವ ಹಣವೆಷ್ಟು ರಸ್ತೆಯಕಿ.ಮೀ. ಎಷ್ಟು (ಖರ್ಚಾಗಿರುವ ಹಣ ಕಿ.ಮೀ.ವಾರು ವರ್ಷಾವಾರು ಕಾಮಗಾರಿಯ ವಿವರ ನೀಡುವುದು)

ಇ) ಅವ್ಯವಹಾರ ಮಾಡಿರುವ ಅಧಿಕಾರಿಗಳ ವಿರುದ್ಧ ಸರಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಈ) ಸದರಿ ರಸ್ತೆಯನ್ನು ಎಂದು ಸರಿಪಡಿಸಲಾಗುವುದು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಸಚಿವರು):

ಅ) ಸದರಿ ರಸ್ತೆಯ ಮೇಲೆ ಖರ್ಚು ತೋರಿಸಿ ಅವ್ಯವಹಾರ ನಡೆದಿರುವುದಿಲ್ಲ.

ಆ) ಜಿಲ್ಲಾ ಪಂಚಾಯತ್ ಇಂಜನಿಯರಿಂಗ್ ಉಪ ವಿಭಾಗ ಸೇಡಂ ವ್ಯಾಪ್ತಿಯಲ್ಲಿ ಸದರಿ ರಸ್ತೆಯು 0.00 ರಿಂದ 4.00 ಕಿ.ಮೀ. ಬರುತ್ತದೆ. ಸದರಿ ರಸ್ತೆಗೆ ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಲಾದ ಹಣದ ಕಿ.ಮೀ.ವಾರು ವಿವರ ಈ ಕೆಳಕಂಡಂತೆ ಇರುತ್ತದೆ.